**MAY 26 2024**
**ALL INDIA RADIO- DHARWAD**
**PRADESH SAMACHARA (KANNADA) 7:05 AM**

**ಮುಖ್ಯಾಂಶಗಳು:**

- **ಕಾನೂನಿನ ಮುಂದೆ, ಎಲ್ಲರೂ ಸಮಾನರು – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ಕಲುಷಿತ ನೀರು ಪೂರೈಕೆ ತಡೆ; ಸಾರ್ವಜನಿಕರ ಆರೋಗ್ಯ ರಕ್ಷಣೆಗೆ, ಪಂಚಾಯತ್‌ರಾಜ್ ಇಲಾಖೆಯಿಂದ, ಕ್ರಮ.**
- **ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ, ಯೂ.ಜಿ.ಸಿ.ಯಿಂದ ಶೈಕ್ಷಣಿಕ ಗರಿಮೆಯ, ಮನ್ನಣೆ.**
- **ಉಪ ರಾಷ್ಟ್ರಪತಿ ಜಗದೀಪ ಧನಕರ, ಬೆಳಗಾವಿ ಹಾಗೂ ಬೆಂಗಳೂರಿಗೆ ನಾಳೆ ಭೇಟಿ; ಹಲವು ಕಾರ್ಯಕ್ರಮಗಳಲ್ಲಿ ಭಾಗಿ.**

<><><>

**ಈಗ ವಾರ್ತೆಗಳ ವಿವರ**

<><><>

**18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆಯ, ಮೊದಲ 5 ಹಂತಗಳ ಮತದಾನದ ನಿಖರ ಅಂಕಿ–ಅಂಶಗಳನ್ನು, ಕೇಂದ್ರ ಚುನಾವಣಾ ಆಯೋಗ ಬಿಡುಗಡೆ ಮಾಡಿದೆ. 6ನೇ ಹಂತದ ಮತದಾನ ನಿನ್ನೆ ಮುಕ್ತಾಯವಾಗಿದ್ದು, ಶೇಕಡ 59 ದಶಾಂಶ 0–6ರಷ್ಟು ಮತದಾನವಾಗಿದೆ. 5 ಹಂತಗಳಲ್ಲಿ ನಡೆದ ಚುನಾವಣೆಯಲ್ಲಿ ಶೇಕಡ 66 ದಶಾಂಶ 3–9ರಷ್ಟು ಮತದಾರರು ಮತ ಚಲಾಯಿಸಿದ್ದಾರೆ. ರಾಜ್ಯದ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ, ಅತೀ ಹೆಚ್ಚು 32 ಲಕ್ಷ 14 ಸಾವಿರದ 496 ಮತದಾರರನ್ನು ಹೊಂದಿದ, ಕ್ಷೇತ್ರವೆಂದು ಘೋಷಿಸಲ್ಪಟ್ಟಿದೆ. ಬೆಂಗಳೂರು ಗ್ರಾಮಾಂತರ, ಅತೀ ಹೆಚ್ಚು ಮತದಾನವಾಗಿರುವ ಕ್ಷೇತ್ರಗಳ ಪೈಕಿ, 19 ಲಕ್ಷ 14 ಸಾವಿರದ 30 ಜನ ಮತದಾರರು ಮತ ಚಲಾಯಿಸಿದ ಕ್ಷೇತ್ರವೆಂದು ಪರಿಗಣಿತವಾಗಿದೆ.**

<><><>

**ಕಾನೂನು, ಸುವ್ಯವಸ್ಥೆ ಸೇರಿದಂತೆ, ಶಾಂತಿ ಕಾಪಾಡಲು, ರಾಜ್ಯಾದ್ಯಂತ ವಿಶೇ ’ ಒತ್ತು ನೀಡಲಾಗಿದೆ. ಕಾನೂನಿನ ಮುಂದೆ ಎಲ್ಲರೂ ಸಮಾನರು. ಕಾನೂನು ಕೈಗೆತ್ತಿಕೊಂಡವರಿಗೆ ಸೂಕ್ತ ಶಿಕ್ಷೆಯಾಗಲಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಮಂಗಳೂರು ವಿಮಾನ ನಿಲ್ದಾಣದಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ ಅವರು, ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಪಡಿಸುವ ರೀತಿ, ನಡೆದುಕೊಂಡ ಪ್ರಕರಣಕ್ಕೆ ಸಂಬಂಧಿಸಿ, ಭಾರತೀಯ ದಂಡ ಸಂಹಿತೆ 353ರ ಅಡಿ, ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡಿದ್ದಾರೆ ಎಂದರು.**

<><><>

ಬಳಿಕ ಮುಖ್ಯಮಂತ್ರಿಯವರು, ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ ನೀಡಿ, ಮಂಜುನಾಥ ಸ್ವಾಮಿಯ ದರ್ಶನ ಪಡೆದು, ವಿಶೇ ' ಪೂಜೆ ಸಲ್ಲಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್.ಸಿ.ಮಹದೇವಪ್ಪ, ಬೈರತಿ ಸುರೇಶ್ ಪಾಲ್ಗೊಂಡಿದ್ದರು.

<><><>

ದಾವಣಗೆರೆ ಜಿಲ್ಲೆ ಚನ್ನಗಿರಿಯಲ್ಲಿ, ಪೊಲೀಸರ ವಶದಲ್ಲಿದ್ದ ವ್ಯಕ್ತಿ ಮೃತಪಟ್ಟ ಘಟನೆಗೆ ಸಂಬಂಧಿಸಿ, ಠಾಣೆಯ ಇನ್ಸ್‌ಪೆಕ್ಟರ್ ಮತ್ತು ಡಿವೈಎಸ್‌ಪಿಯನ್ನು ಅಮಾನತುಗೊಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ.

<><><>

ಕುಡಿಯುವ ನೀರಿನ ಮೂಲಗಳ ಗುಣಮಟ್ಟದ ಪರೀಕ್ಷೆಗಳನ್ನು ಮಳೆಗಾಲದ ಮೊದಲು ಮತ್ತು ನಂತರ ಕೈಗೊಂಡು, ಸಂಬಂಧಪಟ್ಟ ಇಲಾಖೆ ಪೋರ್ಟಲ್‌ನಲ್ಲಿ ವರದಿ ದಾಖಲಿಸುವಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸೂಚಿಸಿದೆ. ಕಲುಷಿತ ನೀರು ಸೇವನೆ ತಡೆಗಟ್ಟಿ, ಸಾರ್ವಜನಿಕರ ಆರೋಗ್ಯದ ಮೇಲೆ ದು ್ಪರಿಣಾಮ ತಡೆಯಲು, ಈ ಕ್ರಮ ಕೈಗೊಳ್ಳಲಾಗಿದೆ. ಕಲುಷಿತವೆಂದು ಕಂಡು ಬರುವ, ನೀರಿನ ಮೂಲಗಳಿಗೆ ಪರ್ಯಾಯವಾಗಿ, ಶುದ್ಧ ಕುಡಿಯುವ ನೀರನ್ನು ಒದಗಿಸಲು, ಕೂಡಲೇ ಕ್ರಮ ಕೈಗೊಂಡು, ಭಾರತ ಸರ್ಕಾರದ ಪೋರ್ಟಲ್‌ನಲ್ಲಿ ದಾಖಲಿಸುವುದನ್ನು ಕಡ್ಡಾಯಗೊಳಿಸಿದೆ. ಕಾಲಕಾಲಕ್ಕೆ ಫೀಲ್ಡ್ ಟೆಸ್ಟ್ ಕಿಟ್ ಖರೀದಿಸಿ, ನೀರಿನ ಗುಣಮಟ್ಟದ ಪರೀಕ್ಷೆಗಳನ್ನು ಸ್ಥಳೀಯವಾಗಿ ಕೈಗೊಂಡು ಪರೀಕ್ಷಾ ವರದಿಗಳನ್ನು ದಾಖಲಿಸುವುದು ಕಡ್ಡಾಯಗೊಳಿಸಲಾಗಿದೆ. ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ, ಕುಡಿಯುವ ನೀರಿನ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಗಳ ಕಾರ್ಯನಿರ್ವಹಣೆಯ ಪ್ರಗತಿ ಪರಿಶೀಲನೆ ಕೈಗೊಳ್ಳುವುದು ನಿಯಮಿತವಾಗಬೇಕು ಎಂದು, ನಿರ್ದೇಶಿಸಿದೆ.

<><><>

ಉಡುಪಿ ಜಿಲ್ಲೆ, ಬೈಂದೂರಿನ ಕಡಲ ತೀರದಲ್ಲಿ, 'ಕ್ಲೀನ್ ಕಿನಾರಾ ತಂಡ', ಶಾಸಕ ಗುರುರಾಜ ಘಂಟಿಹೊಳೆ ಅವರ ಸಾರಥ್ಯದಲ್ಲಿ, ಸ್ವಚ್ಛತಾ ಕಾರ್ಯ ಕೈಗೊಂಡು, ಮಾದರಿಯಾಗಿದೆ. ಪ್ರದೇಶ ಸಮಾಚಾರಕ್ಕಾಗಿ, ಸ್ವಚ್ಛತೆಯ ತಮ್ಮ ಅನುಭವ ಹಂಚಿಕೊಂಡಿದ್ದಾರೆ, ಕ್ಲೀನ್ ಕಿನಾರಾ ತಂಡದ ಸಂಯೋಜಕ, ಸುಬ್ರಹ್ಮಣ್ಯ ಶಾನಭಾಗ.

<><><>

ಸುಬ್ರಹ್ಮಣ್ಯ ಶಾನಭಾಗ ಧ್ವನಿ 50 ಸೆಕೆಂದುಗಳು

<><><>

ಸಾರ್ವಜನಿಕರ ಅರ್ಜಿಗಳನ್ನು ನಿಗದಿ ಪಡಿಸಿದ ಅವಧಿಗೂ ಮೊದಲೇ, ವಿಲೇವಾರಿ ಮಾಡುವಲ್ಲಿ, ಶೇಕಡ 98 ದಶಾಂಶ 0–7 ರಷ್ಟು ಪ್ರಗತಿ ಸಾಧಿಸಿರುವ, ಉತ್ತರಕನ್ನಡ ಜಿಲ್ಲೆ, ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದೆ. ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ, ಸುದ್ದಿಗೋಷ್ಠಿ ನಡೆಸಿ, ಸಕಾಲ ಸೇವೆಯಡಿ, ಸರ್ಕಾರದ ವಿವಿಧ ಸೇವೆಗಳನ್ನು ಕೋರಿ ಸಾರ್ವಜನಿಕರು, 40 ಸಾವಿರದ 996 ಅರ್ಜಿಗಳನ್ನು ಸಲ್ಲಿಸಿದ್ದರು. ಆ ಪೈಕಿ 40 ಸಾವಿರದ 4 ನೂರಾ 79 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. 39 ಸಾವಿರದ 6 ನೂರಾ 96 ಅರ್ಜಿಗಳನ್ನು, ನಿಗದಿತ ಅವಧಿಗೂ ಮೊದಲೇ, ವಿಲೇವಾರಿ ಮಾಡಲಾಗಿದೆ ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಹೊಸ ದಿಲ್ಲಿಯ ವಿಶ್ವವಿದ್ಯಾಲಯಗಳ ಅನುದಾನ ಆಯೋಗ – ಯೂ.ಜಿ.ಸಿ, ಶೈಕ್ಷಣಿಕ ಹಾಗೂ ಸಂಶೋಧನಾತ್ಮಕ ಗರಿಮೆ ಹೊಂದಿರುವ, 234 ಸರ್ಕಾರಿ, ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳನ್ನು, ದೇಶಾದ್ಯಂತ ಗುರುತಿಸಿದೆ. ಆ ಪೈಕಿ, ಕರ್ನಾಟಕದಿಂದ 12 ಖಾಸಗಿ ವಿಶ್ವವಿದ್ಯಾನಿಲಯಗಳು ಹಾಗೂ 9 ಸರ್ಕಾರಿ ವಿಶ್ವವಿದ್ಯಾಲಯಗಳನ್ನು, ಯೂಜಿಸಿ ಗುರುತಿಸಿದೆ. 9 ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯವೂ ಸಹ ಸ್ಥಾನ ಪಡೆದಿದೆ. ಕರ್ನಾಟಕದಿಂದ ಉತ್ಕೃಷ್ಠತೆ ಮಾನದಂಡಗಳಡಿ ಸ್ಥಾನ ಪಡೆದಿರುವ ಏಕೈಕ ಕೃಷಿ ವಿಶ್ವವಿದ್ಯಾಲಯವೆಂಬ ಹೆಗ್ಗಳಿಕೆಗೆ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಪಾತ್ರವಾಗಿದೆ. ವಿದ್ಯಾರ್ಥಿ ಭಾರತದಲ್ಲೇ ಪ್ರವೇಶ ಪಡೆದು, ವಿದೇಶದಲ್ಲಿ ಕಲಿಯುವ ಮತ್ತು ಉದ್ಯೋಗಾವಕಾಶ ಪಡೆಯುವ ಸಾಧ್ಯತೆ ಈ ಅವಕಾಶ ಸೃಷ್ಟಿಸಲಿದೆ.

<><><>

ಕಣ್ಣಿಗೆ ಕಾಣದ ಮತ್ತು ಸುಲಭವಾಗಿ ಗುರುತಿಸಲಾಗದ ಅಂಗವೈಕಲ್ಯವೆಂದರೆ, ಕಿವುಡತನ. ಪ್ರತಿ ನೂರು ಮಕ್ಕಳಲ್ಲಿ ಐದರಷ್ಟು ಮಕ್ಕಳಿಗೆ ಕಿವುಡುತನ ಬಾಧಿಸುತ್ತದೆ. ಅವರೂ ಮೂಕರು ಆಗಿರುವ ಸಾಧ್ಯತೆ ಹೆಚ್ಚು. ಗದಗ್ ಜಿಲ್ಲೆ ಲಕ್ಷ್ಮೇಶ್ವರದ ಬಿ.ಡಿ.ತಟ್ಟಿ ಕಿವುಡ ಮತ್ತು ಮೂಕ ಮಕ್ಕಳ ವಸತಿಯುತ ತರಬೇತಿ ಶಾಲೆ, ಕಿವಿ ಮತ್ತು ಮಾತಿನ ಸಮಸ್ಯೆ ಇರುವ ಮಕ್ಕಳಿಗೆ ಹಾಗೂ ತಾಯಂದಿರಿಗೆ, ಕಳೆದ 3 ದಶಕಗಳಿಂದ ವಿಶೇಷ ತರಬೇತಿ ನೀಡುತ್ತಿರುವ ಶಾಲೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಶಾಲೆಯ ಅಧ್ಯಕ್ಷ ಸೋಮನಾಥ್ ಮಹಾಜನ ಶೆಟ್ಟರ್.

<><><>

ಸೋಮನಾಥ್ ಮಹಾಜನ ಶೆಟ್ಟರ್ ಧ್ವನಿ 40 ಸೆಕೆಂದುಗಳು

<><><>

ಬೆಳಗಾವಿಯ ನ್ಯಾ ʼನಲ್ ಇನ್ಸ್ಟಿಟ್ಯೂಟ್ ಆಫ್ ಟ್ರಡಿ ʼನಲ್ ಮೆಡಿಸಿನ್, ಸಂಸ್ಥಾಪನಾ ದಿನಾಚರಣೆನ ಸೋಮವಾರ ಜರುಗಲಿದ್ದು, ಉಪರಾಷ್ಟ್ರಪತಿ ಜಗದೀಪ ಧನಕರ ಅವರು ಸಪತ್ನೀಕರಾಗಿ ಪಾಲ್ಗೊಳ್ಳಲಿದ್ದಾರೆ. ಬೆಳಗಾವಿಯ ಕೆ.ಎಲ್.ಇ. ವಿಶ್ವವಿದ್ಯಾಲಯದ 14ನೇ ಘಟಿಕೋತ್ಸವದಲ್ಲಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಬಳಿಕ, ಉಪ ರಾಷ್ಟ್ರಪತಿಯವರು ಬೆಂಗಳೂರಿನ ನ್ಯಾ ʼನಲ್ ಏರೋನಾಟಿಕ್ಸ್ ಲಿಮಿಟೆಡ್‌ಗೆ ಭೇಟಿ ನೀಡಲಿದ್ದಾರೆ. ಉಪ ರಾಷ್ಟ್ರಪತಿಗಳು ಬೆಂಗಳೂರಿನ ರಾಜಭವನಕ್ಕೂ ಭೇಟಿ ನೀಡುವ ಕಾರ್ಯಕ್ರಮವಿದೆ.

<><><>

ಸ್ಕೌಟ್ಸ್ ಆಂಡ್ ಗೈಡ್ಸ್, ರೋವರ್ಸ್ ಹಾಗೂ ರೇಂಜರ್ಸ್‌ಗಳು, ಪೊಲೀಸರು ಠಾಣೆಯಲ್ಲಿ ನಿರ್ವಹಿಸುವ ಕೆಲಸಗಳ ಬಗ್ಗೆ ಮಾಹಿತಿ ಪಡೆಯಲು, ಹಾವೇರಿ ಜಿಲ್ಲೆ, ಸವಣೂರು ಪೊಲೀಸ್ ಠಾಣೆಗೆ ಭೇಟಿ ನೀಡಿದ್ದರು. 'ತೆರೆದ ಮನೆ' ಕಾರ್ಯಕ್ರಮದಲ್ಲಿ, ಸವಣೂರು ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಪ್ರಮೀಳಮ್ಮ, ರೋವರ್ಸ್ ಹಾಗೂ ರೇಂಜರ್ಸ್‌ಗಳಿಗೆ, ಪೊಲೀಸರು ನಿರ್ವಹಿಸುವ ಕಡತ, ಹುದ್ದೆಗಳು, ಉದ್ಯೋಗಾವಕಾಶ ಹಾಗೂ ಕಾನೂನು, ಸುವ್ಯವಸ್ಥೆ ಸೇರಿದಂತೆ, ಜನ ಸ್ನೇಹಿ ಪೊಲೀಸ್ ಸೇವೆಗಳ ಬಗ್ಗೆ ಮಾಹಿತಿ ನೀಡಿದರು.

<><><>

ಕೊಡಗು ಜಿಲ್ಲೆ, ಸುಂಟಿಕೊಪ್ಪ ಬಳಿ, 7ನೇ ಹೊಸಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ತೊಂಡೂರು ಕಾಫಿ ತೋಟದಲ್ಲಿ, ಕಾಡಾನೆ ಕಳೇಬರ ಪತ್ತೆಯಾಗಿದೆ. ಮರಣೋತ್ತರ ಪರೀಕ್ಷೆಯ ನಂತರ, ಆನೆಯ ಸಾವಿಗೆ ನಿಖರ ಕಾರಣ ತಿಳಿದು ಬರಲಿದೆ ಎಂದು, ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

<><><>

ಮಂಗಳೂರಿನ ಶಾಯ್ನಾ ಮಣಿಮುತ್ತು, ದಾವಣಗೆರೆಯ ನೇತಾಜಿ ಸುಭಾಷ್ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ, ರಾಜ್ಯ ರ್‍ಯಾಂಕಿಂಗ್ ಸಬ್ ಜ್ಯೂನಿಯರ್ ಬ್ಯಾಡ್ಮಿಂಟನ್ ಫಿಡೆ ರೇಟೆಡ್ ಟೂರ್ನಿಯಲ್ಲಿ, ವಿಜಯಿಯಾಗಿದ್ದಾರೆ. 17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಶಾಯ್ನಾ ಅವರು, 21–19, 21–14 ಅಂಗಳೊಂದಿಗೆ, ಮೈಸೂರುನ ಆಟಗಾರ್ತಿ, ಅಗ್ರ ಶ್ರೇಯಾಂಕಿತೆ ದಿಯಾ ಭೀಮಯ್ಯ ಎದುರು ಗೆದ್ದರು.

<><><>

'ಬೇಟಿ ಬಚಾವೋ; ಬೇಟಿ ಪಢಾವೋ' ಅಭಿಯಾನ ನಿಮಿತ್ತ, ಬೀದರ, ಮಡಿವಾಳದ ಗುಡ್‌ವಿಲ್ ಪಬ್ಲಿಕ್ ಶಾಲೆ, 25 ಕಾರ್ಮಿಕರ ಮಕ್ಕಳು ಹಾಗೂ 25 ಹೆಣ್ಣು ಮಕ್ಕಳಿಗೆ, ಉಚಿತ ಶಿಕ್ಷಣ ನೀಡಲಿದೆ. ಉಚಿತ ಪ್ರವೇಶಾತಿಗೆ, ಇದೇ 31 ಕೊನೆಯ ದಿನವಾಗಿದೆ.

<><><>

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘ, ರಾ.ಹ. ದೇಶಪಾಂಡೆ ಸಭಾಭವನದಲ್ಲಿ, ಇಂದು ಸಂಜೆ 6 ಗಂಟೆಗೆ, ಧಾರವಾಡದ ಹಿರಿಯ ರಂಗಕರ್ಮಿ ಡಾಕ್ಟರ್ ಶಶಿಧರ ನರೇಂದ್ರ, ಪ್ರೊಫೆಸರ್ ಎಲ್.ಎಸ್. ಶೇಷಗಿರಿರಾವ್ ಬದುಕು–ಬರೆಹ ಕುರಿತು, ವಿಶೇಷ ಉಪನ್ಯಾಸ ನೀಡಲಿದ್ದಾರೆ.

<><><>

ತಂಬಾಕು ಮುಕ್ತ ವಿಶ್ವ ದಿನದ ಹಿನ್ನೆಲೆ, ಕೊಟ್ಪಾ ಕಾಯ್ದೆ ಅಡಿ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತಂಬಾಕು ಮುಕ್ತ ಶಾಲೆ, ಮಹಾವಿದ್ಯಾಲಯಗಳು ಹಾಗೂ ಸರ್ಕಾರಿ ಕಚೇರಿಗಳು ಎಂಬ ಆಂದೋಲನ, ಜಾರಿಯಲ್ಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಕಾನೂನಿನ ಮುಂದೆ, ಎಲ್ಲರೂ ಸಮಾನರು – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಕಲುಷಿತ ನೀರು ಪೂರೈಕೆ ತಡೆ; ಸಾರ್ವಜನಿಕರ ಆರೋಗ್ಯ ರಕ್ಷಣೆಗೆ, ಪಂಚಾಯತ್‌ರಾಜ್ ಇಲಾಖೆಯಿಂದ, ಕ್ರಮ.
- ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ, ಯು.ಜಿ.ಸಿ.ಯಿಂದ ಶೈಕ್ಷಣಿಕ ಗರಿಮೆಯ, ಮನ್ನಣೆ.
- ಉಪ ರಾಷ್ಟ್ರಪತಿ ಜಗದೀಪ ಧನಕರ, ಬೆಳಗಾವಿ ಹಾಗೂ ಬೆಂಗಳೂರಿಗೆ ನಾಳೆ ಭೇಟಿ; ಹಲವು ಕಾರ್ಯಕ್ರಮಗಳಲ್ಲಿ ಭಾಗಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>